2008–09ನೇ ಸಾಲಿನಲ್ಲಿ ಹೊಸ 4 ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲು ಕ್ರಮವಹಿಸಲಾಗುವುದು.

ಪಸಂಮೀ : 11 : ಸಲೆವಿ : 2009.

(ರೇವೂನಾಯಕ್ ಬೆಳಮಗಿ)
ಪಶುಸಂಗೋಪನಾ ಸಚಿವರು.

ಕರ್ನಾಟಕ ವಿಧಾನ ಸಭೆ

296 ಶ್ರೀ ಹ್ಯಾರೀಸ್ ಎನ್.ಎ[ಶಾಂತಿನಗರ]

ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು.

ಅ. ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲಿರುವ ವಿವಿಧ ಮಾಧ್ಯಮದ ಸರ್ಕಾರಿ ಪ್ರಾಥಮಿಕ ಶಾಲೆಗಳ ಸಂಖ್ಯೆ ಎಷ್ಟು(ಭಾಷಾವಾರು ಶಾಲೆಗಳ ಸಂಖ್ಯೆ ನೀಡುವುದು);

ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲಿರುವ ವಿವಿಧ ಮಾಧ್ಯಮದ ಸರ್ಕಾರಿ ಪ್ರಾಥಮಿಕ ಶಾಲೆಗಳ ಸಂಖ್ಯೆ ಈ ಕೆಳಕಂಡಂತಿವೆ.

ಮಾಧ್ಯಮ	ಬೆಂ.ಉತ್ತರ	ಬೆಂ.ದಕ್ಷಿಣ	ಬೆಂ. ಗ್ರಾಮಾಂತರ
ಕನ್ನಡ	421	784	1074
ತಮಿಳು	13	13	00
ತೆಲುಗು	06	03	02
ಉರ್ದು	72	109	75
ಒಟ್ಟು	512	909	1150

ಆ. ಈ ಜಿಲ್ಲೆಗಳಲ್ಲಿರುವ ಉರ್ದು ಪ್ರಾಥಮಿಕ ಶಾಲೆಗಳ ಸಂಖ್ಯೆ ಎಷ್ಟು; ಉರ್ದು ಶಾಲೆಗಳಿಗೆ ಮಂಜೂರಾಗಿರುವ ಕನ್ನಡ ಮತ್ತಿತರ ಶಿಕ್ಷಕರುಗಳ ಎಷ್ಟು ಹುದ್ದೆಗಳು ಖಾಲಿ ಇವೆ; ಅವುಗಳನ್ನು ತುಂಬಲು ಸರ್ಕಾರದ ಕ್ರಮಗಳೇನು;

ಜಿಲ್ಲೆ	ಉರ್ದು ಶಾಲೆಗಳ ಸಂಖ್ಯೆ	ಖಾಲಿ ಇರುವ ಕನ್ನಡ ಶಿಕ್ಷಕರ ಹುದ್ದೆಗಳ ಸಂಖ್ಯೆ
ಬೆಂ.ಉತ್ತರ	72	00
ಬೆಂ.ದಕ್ಷಿಣ	109	09
ಬೆಂ.ಗ್ರಾಮಾಂತರ	75	01

ರಾಜ್ಯದೆಲ್ಲೆಡೆ ಮೇಲ್ಕಂಡ 100 ಖಾಲಿ ಹುದ್ದೆಗಳೂ ಸೇರಿದಂತೆ ಒಟ್ಟು ಖಾಲಿ ಇರುವ 4928 ಕನ್ನಡ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ. ಉರ್ದು ಸರ್ಕಾರಿ ಶಾಲೆಗಳಲ್ಲಿ ಕಟ್ಟಡ ಮತ್ತಿತರ ಮೂಲಸೌಲಭ್ಯಗಳನ್ನು ಒದಗಿಸಿಕೊಡಲಾಗಿದೆಯೇ; ಇಲ್ಲವಾದಲ್ಲಿ ಎಷ್ಟು ಶಾಲೆಗಳು ಈ ಕೊರತೆಯನ್ನು ಎದುರಿಸುತ್ತಿವೆ?

ಬೆಂ.ಉತ್ತರ ಜಿಲ್ಲೆಯಲ್ಲಿ 34 ಉರ್ದುಶಾಲೆಗಳಲ್ಲಿ ಮೂಲಭೂತ ಸೌಲಭ್ಯದ ಕೊರತೆ ಇರುತ್ತದೆ.

ಬೆಂ. ದಕ್ಷಿಣ ಜಿಲ್ಲೆಯಲ್ಲಿನ ಎಲ್ಲಾ 109 ಉರ್ದುಶಾಲೆಗಳಲ್ಲಿ ಅಗತ್ಯ ಮೂಲಭೂತ ಸೌಲಭ್ಯ ಒದಗಿಸಲಾಗಿದೆ.

ಬೆಂ.ಗ್ರಾಮಾಂತರ ಜಿಲ್ಲೆಯಲ್ಲಿ 3 ಉರ್ದು ಶಾಲೆಗಳು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದೆ. 16 ಶಾಲೆಗಳಿಗೆ ಶೌಚಾಲಯ, 20 ಶಾಲೆಗಳಿಗೆ ಕುಡಿಯುವ ನೀರು, 22 ಶಾಲೆಗಳಿಗೆ ವಿದ್ಯುತ್ ಮತ್ತು 27 ಶಾಲೆಗಳಿಗೆ ಕಾಂಪೌಂಡ್ ಸೌಲಭ್ಯಗಳಿರುವುದಿಲ್ಲ. ಅನುದಾನವನ್ನು ಲಭ್ಯತೆಯನ್ನು ಆಧರಿಸಿ ಹಂತ ಹಂತವಾಗಿ ಇವುಗಳಿಗೆ ಮೂಲಭೂತ ಸೌಕರ್ಯವನ್ನು ಒದಗಿಸಲು ಕ್ರಮ ವಹಿಸಲಾಗುವುದು.

ಇಡಿ 53 ಯೋಸಕ 2009

ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು.

ಕರ್ನಾಟಕ ವಿಧಾನ ಸಭೆ

297

ಶ್ರೀ ಹ್ಯಾರೀಸ್ ಎನ್.ಎ[ಶಾಂತಿನಗರ]

ಮಾನ್ಯ ವಸತಿ ಮತ್ತು ಮುಜರಾಯಿ ಸಚಿವರು.

1. ನಗರ ಪ್ರದೇಶಗಳಲ್ಲಿನ ಬಡ ವಸತಿಹೀನ ಜನರಿಗೆ ವಸತಿ ಸೌಲಭ್ಯ ಕಲ್ಪಿಸಲು ಸರ್ಕಾರ ರೂಪಿಸಿರುವ ಯೋಜನೆಗಳ ವಿವರಗಳೇನು? ಎಷ್ಟು ಜನರಿಗೆ ಕಳೆದ ಎರಡು ವರ್ಷಗಳಲ್ಲಿ ಮನೆ ಮತ್ತು ನಿವೇಶನಗಳನ್ನು ಒದಗಿಸಿ ಕೊಡಲಾಗಿದೆ?

ನಗರ ಪ್ರದೇಶಗಳಲ್ಲಿನ ಬಡ ವಸತಿಹೀನ ಜನರಿಗೆ ವಸತಿ ಸೌಲಭ್ಯ ಕಲ್ಪಿಸಲು pf.pಎಲ್ಪ್ ಮಂಡಳಿಗೆ ಅವಕಾಶವಿರುವುದಿಲ್ಲ. ಆದರೆ ನಗರದ ಪ್ರದೇಶಗಳಲ್ಲಿ ಮಂಡಳಿ ವತಿಯಿಂದ ಘೋಷಿತ ಕೊಳವೆ ಪ್ರದೇಶಗಳಲ್ಲಿನ ನಿವಾಸಿಗಳಿಗೆ ವಸತಿ ಸೌಲಭ್ಯ ಒದಗಿಸಲು ಕೇಂದ್ರ ಸರ್ಕಾರವು JNNURMನ BSUP-IHSDP ಯೋಜನೆಗಳನ್ನು ರೂಪಿಸಿರುತ್ತದೆ. ಕಳೆದ ಎರಡು ವರ್ಷಗಳಲ್ಲಿ ಮಂಜೂರಾದ ಯೋಜನೆ ವಿವರಗಳು ಈ ಕೆಳಕಂಡಂತಿವೆ.

ಕ್ರ ಸಂಖ್ಯೆ	ಹಂತ	ಯೋಜನೆ	ಮನೆಗಳು
1	Bangalore Phase 1	BSUP	11603
2	Bangalore Phase- II	BSUP	3151